

## ನಾ ಹೊರಗಿನವಳಲ್ಲ!

‘ನನ್ನ ಬಳಿ ದೊಡ್ಡ ನಿರ್ಮಾಣ ಸಂಸ್ಥೆಯಿಲ್ಲ, ದೊಡ್ಡ ನಿರ್ದೇಶಕ ಅಥವಾ ನಟ ನನ್ನ ಬೆನ್ನಿಗಿಲ್ಲ. ನಾನು ಹೊರಗಿನಿಂದ ಬಂದವಳು, ಇಲ್ಲಿ ಯಾರೂ ನನಗೆ ಪರಿಚಿತರಲ್ಲ. ಇಲ್ಲಿ ಆಡುವ ಬಗೆಯೂ ನನಗೆ ತಿಳಿದಿಲ್ಲ. ಬೇರೆಯವರಿಗಿಂತ ಮುಂದಕ್ಕೆ ಸಾಗಲು ಅಥವಾ ಯಾರನ್ನೋ ಹಿಂದಿಕ್ಕಲು ಬೇರೆಯದೇ ಮಾರ್ಗ ಅಥವಾ ಯೋಜನೆ ಹಿಡಿಯುವುದನ್ನು ಕಲ್ಪಿಸಿಕೊಳ್ಳಲಾರೆ. ನಾನು ಹಂತ ಹಂತವಾಗಿ ಅವಕಾಶಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ’– ನೋವು, ವಿಷಾದ, ಭರವಸೆಯ ಭಾವಗಳನ್ನು ಬೆರೆತ ಈ ಮಾತುಗಳನ್ನಾಡಿರುವುದು ಅದಿತಿ ರಾವ್ ಹೈದರಿ.

‘ಡೆಲ್ಲಿ 6’, ‘ಯೇ ಸಾಲಿ ಜಿಂದಗಿ’, ‘ರಾಕ್‌ಸ್ಟಾರ್’ ಮುಂತಾದ ಚಿತ್ರಗಳಲ್ಲಿ ನಟಿಸಿರುವ ಅದಿತಿಗೆ, ಬಾಲಿವುಡ್ ಇನ್ನೂ ತನ್ನನ್ನು ತಮ್ಮವಳೆಂದು ಸ್ವೀಕರಿಸಿಲ್ಲ ಎಂಬ ನೋವಿದೆ. ತನ್ನನ್ನು ಹೊರಗಿನವಳೆಂದೇ ಬಾಲಿವುಡ್ ಪರಿಗಣಿಸುತ್ತಿದೆ ಎಂದು ಆಕೆಗನಿಸಿದೆ. ಇತರೆ ನಟಿಯರು ಹೊಂದಿರುವಂತೆ ಪ್ರೋತ್ಸಾಹಕರ ವ್ಯವಸ್ಥೆ ತನ್ನ ಬೆನ್ನ ಹಿಂದಿಲ್ಲ ಎಂದು ಆಕೆಗೆ ಹಲವು ಸಂದರ್ಭಗಳಲ್ಲಿ ಎನಿಸಿದೆ.

‘ಸಾಮಾಜಿಕ ಮಾಧ್ಯಮದಲ್ಲಿ ಏನನ್ನಾದರೂ ಬರೆದುಕೊಂಡಾಗ ಕೆಲವು ಬೆಂಬಲ ನೀಡುತ್ತಾರೆ. ಅದು ಖುಷಿ ನೀಡುತ್ತದೆ. ಆದರೆ ಉಳಿದ ನಟಿಯರಿಗೆ ಹೀಗೆ ಮಾಡು, ಇದನ್ನು ಮಾಡಬೇಡ ಎಂದು ತಿಳಿ ಹೇಳುವ ಅವರ ಸ್ನೇಹಿತರು, ಬಂಧು ಬಳಗ ಆಪ್ತೇಷ್ಟರು ಜೊತೆಯಲ್ಲಿ ಇರುತ್ತಾರೆ. ನನಗೆ ಅಂತಹ ಮಾರ್ಗದರ್ಶಕರಿಲ್ಲ. ವಿಶಾಲವಾಗಿ ಯೋಚಿಸಿದಾಗ ಇಂತಹ ಬೆಂಬಲಗಳ ಅನಿವಾರ್ಯತೆ ಮುಖ್ಯವಲ್ಲ. ಇಂದಿನ ಡಿಜಿಟಲ್ ಜಗತ್ತಿನಲ್ಲಿ ನಾವು ವರ್ಚಸ್ಸಿನ ಮೂಲಕವೇ ಸಾಗಬೇಕು. ಹಾಗಾಗಿ ಅದು ಮುಖ್ಯವೆನಿಸುತ್ತದೆ’ ಎನ್ನುವುದು ಆಕೆ ಅಭಿಪ್ರಾಯ.

ತನ್ನದು ಸಿನಿಮಾ ಕುಟುಂಬ ಹಿನ್ನೆಲೆಯಾಗದಿರುವುದರಿಂದ ಮತ್ತು ದೊಡ್ಡ ಮನುಷ್ಯರ ಬೆಂಬಲ ಇಲ್ಲದೆ ಇರುವುದರಿಂದ ಪ್ರತಿದಿನವೂ ಸವಾಲನ್ನು ಎದುರಿಸಲೇಬೇಕು. ಇಂದಿಗೂ ತಾನು ಬಯಸಿದ ಸಿನಿಮಾಗಳನ್ನು ಮಾಡುವುದಕ್ಕೆ ಸಾಕಷ್ಟು ಹೆಣಗಾಟ ನಡೆಸಲೇಬೇಕಾಗಿದೆ ಎಂದು ಅದಿತಿ ಬೇಸರ ಹಂಚಿಕೊಂಡಿದ್ದಾಳೆ.



## ಕೃತಿಯ ಕೃತಿ!

‘ನಿರ್ದೇಶಕ ದಿನೇಶ್ ವಿಜಯನ್ ಒಂದು ಸನ್ನಿವೇಶವನ್ನು ನಟಿಸಿ ತೋರಿಸಲು ಹೇಳಿದರು. ಸೋಫಾ ಮೇಲೆ ಕುಳಿತಿದ್ದ ನಾವು ಯಾವ ಪೂರ್ವಸಿದ್ಧತೆಯೂ ಇಲ್ಲದೆ ಚೆನ್ನಾಗಿ ನಿಭಾಯಿಸಿದೆವು. ಅದೊಂಥರ ವಿಶೇಷ ಅನುಭವ. ಅದನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಅಲ್ಲಿ ಹೊಸ ನಂಟು, ಕಿಡಿ ಇತ್ತು. ಮಿಗಿಲಾಗಿ ಅದು ನಮ್ಮಿಬ್ಬರ ಮೊದಲ ಭೇಟಿಯಾಗಿದ್ದರೂ ದೀರ್ಘಕಾಲದ ಅನುಬಂಧವಿದ್ದಂತಹ ಕೆಮಿಸ್ಟ್ರಿ ಇತ್ತು’– ಹೀಗೆ ಸಿನಿಮಾ ಚಿತ್ರೀಕರಣಕ್ಕೂ ಮೊದಲೇ ನಟ ಸುಶಾಂತ್ ಸಿಂಗ್ ರಜಪೂತ್ ಜತೆ ಅದ್ಭುತ ಕೆಮಿಸ್ಟ್ರಿ ಇದೆ ಎಂಬುದನ್ನು ಕಂಡುಕೊಂಡ ನಟಿ ಕೃತಿ ಸನೋನ್.

ರೋಹಿತ್ ಶೆಟ್ಟಿ ನಿರ್ದೇಶನದ ಶಾರುಖ್ ಮತ್ತು ಕಾಜಲ್ ಜೋಡಿಯ ‘ದಿಲ್‌ವಾಲೆ’ ಚಿತ್ರದಿಂದ ಕೃತಿ ಬಿಟೌನ್‌ನಲ್ಲಿ ಒಂದಷ್ಟು ಹೆಸರು ಮಾಡಿದ್ದಾಳೆ. ಆ ಯಶಸ್ಸು ಆಕೆಗೆ ಅವಕಾಶಗಳನ್ನೂ ತಂದುಕೊಡುತ್ತಿದೆ. ದಿನೇಶ್ ವಿಜಯನ್ ನಿರ್ದೇಶನದ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ಇದು ತನ್ನ ಪಾಲಿಗೆ ವಿಭಿನ್ನ ಸಿನಿಮಾ ಎಂದು ಕೃತಿ ಹೇಳಿಕೊಳ್ಳುತ್ತಾಳೆ. ಪ್ರೀತಿ, ಕನಸು, ವಿಧಿ ಇವುಗಳನ್ನು ಕುರಿತ ಸಿನಿಮಾ ಇದು. ಸದ್ಯ ಸುಶಾಂತ್ ಸಿಂಗ್ ಕ್ರಿಕೆಟಿಗ ಮಹೇಂದ್ರ ಸಿಂಗ್ ದೋನಿ ಜೀವನಗಾಥೆಯ ಚಿತ್ರದಲ್ಲಿ ಬಿಜಿಯಾಗಿರುವುದರಿಂದ ಈ ಚಿತ್ರದ ಪ್ರಾರಂಭಕ್ಕೆ ಇನ್ನೂ ಮುಹೂರ್ತ ಕೂಡಿಬಂದಿಲ್ಲ. ಬಿಟೌನ್‌ನಲ್ಲಿ ಇಟ್ಟಿರುವುದು ಎರಡು ಹೆಜ್ಜೆಗಳಷ್ಟೇ. ಹೀಗಾಗಿ ತನಗೆ ಸಿನಿಮಾಗಳನ್ನು ಮಾಡುವಲ್ಲಿ ಆತುರವಿಲ್ಲ ಎಂದು ಆಕೆ ಹೇಳಿಕೊಳ್ಳುತ್ತಾಳೆ. ಆದರೆ ಸುತ್ತಲೂ ಇರುವ ಪೈಪೋಟಿಯ ಕುರಿತು ಆಕೆಗೆ ಅರಿವಿದೆಯಂತೆ. ಪ್ರತಿಯೊಬ್ಬರನ್ನೂ ಸ್ಪರ್ಧಿ ಎಂದೇ ಕೃತಿ ಪರಿಗಣಿಸುವುದು. ‘ಅಲಿಯಾ, ಶ್ರದ್ಧಾ, ಪರಿಣೀತಿ ಹೀಗೆ ಎಲ್ಲಾ ನಟಿಯರೂ ಚೆನ್ನಾಗಿ ನಟಿಸುತ್ತಿದ್ದಾರೆ. ಅನೇಕ ಚಿತ್ರಗಳನ್ನೂ ಮಾಡಿದ್ದಾರೆ. ತಾಂತ್ರಿಕವಾಗಿ ನಾನು ಅವರೆಲ್ಲರಿಗಿಂತ ಹೊಸಬಳು. ಎಲ್ಲರೂ ಸಿನಿಮಾ ಆಯ್ಕೆಯಲ್ಲಿ ಚೂಸಿಯಾಗಿದ್ದಾರೆ’ ಎಂದು ಸಮಕಾಲೀನ ನಟಿಯರ ಕುರಿತು ಮಾತನಾಡಿದ್ದಾಳೆ ಕೃತಿ. ತನ್ನ ಈ ಎಲ್ಲಾ ಸ್ಪರ್ಧಿಗಳೂ ತಾರಾ ಕುಟುಂಬದ ಮಕ್ಕಳೇ. ಆದರೆ ತನ್ನದು ಸಿನಿಮಾ ಹಿನ್ನೆಲೆಯಲ್ಲ. ಸಿನಿಮಾ ನಂಟು ಆರಂಭದ ಹೆಜ್ಜೆಗಳನ್ನಿರಿಸಲು ಮಾತ್ರ ನೆರವು ನೀಡುತ್ತದೆ. ಆದರೆ ಬೆಳೆಯುವುದು ನಮ್ಮ ಪರಿಶ್ರಮದ ಮೇಲೆ ನಿಂತಿದೆ ಎನ್ನುತ್ತಾಳೆ ಕೃತಿ. ಮಾತಿನಲ್ಲಿ ಹೇಳಲಾಗದ್ದನ್ನು ಕೃತಿಯಲ್ಲಿ ತೋರಿಸುವುದು ಈ ಕೃತಿಯ ಬಯಕೆ.

■ ಅಮಿ